ಶ್ರೀ ವೈಜನಾಥ ಪಾಟೀಲ್ : ಅದರ ಬಗ್ಗೆ ಒಂದು ಜನರಲ್ ಪಾಲಿಸಿ ಇದೆ. ಎಲ್ಲಾ ಮುನಿಸಿಪಾಲಿಟಿಗಳವರು ಮೂರನೇ ಒಂದು ಭಾಗ ಕೊಡಬೇಕೆಂದಿದೆ. ಹಿಂದಿನ ಸರ್ಕಾರದಿಂದಲೂ ಹಾಗೆ ಒಂದು ಪಾಲಿಸಿ ಇದೆ. ತಾವು ಸಲಹೆ ಕೊಡುತ್ತಿದ್ದೀರಿ ಸ್ಪೆಷಲ್ ಗ್ರಾಂಟ್ ಕೊಡಿ ಎಂದು. ಸಾಧ್ಯವಾದರೆ ಕೊಡುತ್ತೇವೆ. ಇಲ್ಲದಿದ್ದರೆ ಸ್ಪೆಷಲ್ ಗ್ರಾಂಟ್‌ನಲ್ಲಿ ಕೊಡುತ್ತೇವೆ. ಮೂರನೇ ಒಂದು ಭಾಗ 4 ಲಕ್ಷ ರೂಪಾಯಿಗಳನ್ನು ಮುನಿಸಿಪಾಲಿಟಿಯವರು ಕಟ್ಟಬೇಕು. ಮೂರನೇ ಒಂದು ಭಾಗ ಸರ್ಕಾರದವರು ಮತ್ತು ಮೂರನೇ ಒಂದು ಭಾಗವನ್ನೂ ಲೋನ್ ಆಗಿ ತೆಗೆದುಕೊಳ್ಳಬೇಕು ಎಂದು ಸರ್ಕಾರದ ನೀತಿ ಇದೆ. ಅನೇಕ ಮುನಿಸಿಪಾಲಿಟಿಯವರು ಮೂರನೆಯ ಒಂದು ಭಾಗವನ್ನೂ ಕೊಡುತ್ತಾ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನಮ್ಮ ಬಾಬ್ತು ನಾಲ್ಕು ಲಕ್ಷ ರೂಪಾಯಿಗಳನ್ನು ಕಟ್ಟಿದರೆ ಕೆಲಸ ಶುರು ಮಾಡುತ್ತೇವೆಂದು ಹೇಳುತ್ತಾರೆ. ಅಲ್ಲಿ ಪುರಸಭೆಯಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಾಂಪ್ಲೆಕ್ಸ್ ಮಾಡಿ ಪುರಸಭೆಯವರು ಆಸ್ತಿ ಮಾಡಿದ್ದಾರೆ. ಅಕ್ಕಾಯಿ ಬದಲು ಡೆವಲಪ್ಮೆಂಟ್ ಗ್ರಾಂಟ್ ಏನು ಕೊಡುತ್ತೀರಿ ಅದನ್ನು ಬಿಡುಗಡೆ ಮಾಡಲಿಲ್ಲ. ಅದಕ್ಕೆ ನಾನೇನು ಹೇಳಿದೆ ಆ 4 ಲಕ್ಷ ರೂಪಾಯಿ ಹಿಡಿದುಕೊಂಡು ಆ ರೀತಿ ಆದೇಶ ಕೊಟ್ಟರೆ ಕುಡಿಯುವ ನೀರಿನ ಅಭಾವವಾದರೂ ತಪ್ಪುತ್ತದೆ. ಆದ್ದರಿಂದ ಅದನ್ನಾದರೂ ಮಾಡಬಹುದು ಎಂದು ಕೇಳಿದೆ.

ಶ್ರೀ ವೈಜನಾಥ ಪಾಟೀಲ್ : ಅಕ್ಕಾಯಿ ಗ್ರಾಂಟ್‌ನ್ನು ಕೊಡದಿದ್ದರೆ ಅದನ್ನು ಬಿಡುಗಡೆ ಮಾಡುತ್ತೇವೆ, ಮುನಿಸಿಪಾಲಿಟಿಯವರು ಕಟ್ಟಬೇಕಾದ ಹಣ ಕಟ್ಟದಿದ್ದರೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ಉದ್ಯಮಗಳು

353 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, (ಜೀರಾದ್) : ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ಉದ್ಯಮಗಳು ಯಾವುವು?

ಆ) ಈ ಉದ್ಯಮಗಳಲ್ಲಿ ಎಷ್ಟು ಲಾಭದಲ್ಲಿ ನಡೆಯುತ್ತಿವೆ ಹಾಗೂ ಎಷ್ಟು ನಷ್ಟದಲ್ಲಿ ನಡೆಯುತ್ತಿವೆ?

ಇ) ಕಳೆದ 5 ವರ್ಷಗಳಲ್ಲಿ ಇವು ಅನುಭವಿಸಿದ ಲಾಭ ಹಾಗೂ ನಷ್ಟದ ಪ್ರಮಾಣವೆಷ್ಟು?

ಈ) ನಷ್ಟದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ಹಾಗಿದ್ದಲ್ಲಿ, ಅಂತಹ ಉದ್ಯಮಗಳ ಹೆಸರುಗಳ ವಿವರಗಳನ್ನು ಒದಗಿಸುವುದು?

ಉ) ಇಲ್ಲದಿದ್ದಲ್ಲಿ ಅವುಗಳ ಪುನಶ್ಚೇತನಕ್ಕಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ರೂಪಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(93-94ನೇ ಸಾಲಿನಲ್ಲಿದ್ದಂತೆ)

ಲಾಭದಲ್ಲಿ ನಡೆಯುತ್ತಿರುವ		
ಸಾರ್ವಜನಿಕ ಉದ್ದಯಮಗಳು	-	11
ನಷ್ಟದಲ್ಲಿ ನಡೆಯುತ್ತಿರುವ		
ಸಾರ್ವಜನಿಕ ಉದ್ಯಮಗಳು	-	8

ಇ) ಅನುಬಂಧದಲ್ಲಿ ಮಾಹಿತಿಗಳನ್ನು ಒದಗಿಸಲಾಗಿದೆ.

ಈ) ಸತತವಾಗಿ ನಷ್ಟವನ್ನು ಅನುಭವಿಸುತ್ತಿರುವ ಸಾರ್ವಜನಿಕ ಉದ್ಯಮಗಳ ಪುನಃಶ್ಚೇತವನ್ನು ಯಾವ ರೀತಿ ಕೈಗೊಳ್ಳಬೇಕೆಂಬ ವಿಷಯವನ್ನು ಸರ್ಕಾರವು ತೀವ್ರ ಪರಿಶೀಲಿಸುತ್ತಿದೆ. ಸಾರ್ವಜನಿಕ ಉದ್ಯಮಗಳ ಪುನರ್ ಸಜ್ಜೀಕರಣಕ್ಕೆ ಖಾಸಗೀಕರಮವು ನೆರವಾಗುವುದರಲ್ಲಿ ಆ ವಿಧಾನವನ್ನು ಸಹ ಪರಿಗಣಿಸಲಾಗುವುದು

ಉ) ಸತತವಾಗಿ ನಷ್ಟ ಅನುಭವಿಸುತ್ತಿರುವ ಸಾರ್ವಜನಿಕ ಉದ್ಯಮಗಳ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಿದ ನಂತರ ಈ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

Annexure

Public Sector Undertakings

1. Chamundi Machine Tools Limited
2. Hutti Gold Mines Limited
3. Karnataka Implements & Machinaries Com.Ltd.(KIMCO)
4. Karnataka State Electronics Development Corporation Limited (KEONIOS).
5. Karnataka State Industrial Investement and Development Corporation Limited.
6. Mysore Acetate & Chemicals Company Limited.
7. Karnataka Telecom Limited.
8. Mysore Cosmetics Limited
9. Mysore Sugar Company Limited.
10. New Government Electric Factory(NGEF)
11. Karnataka Vidyuth Karkhane (KAVIKA)
12. Mysore Paints & Detergents Limited (KS & DL).
14. Mysore Electrical Industries Limited.
15. Mysore Lamp works Limited.
16. Mysore Chrome Tanning Company Limited.
17. Mysore Sales International Limited.
18. Mysore Paper Mills Limited.
19. Marketting Consultants And Agencies Limited.

Particulars of Profit/Loss of the above Public Sector Undertaking for the last 5 years

1. C.M.T.L

Year	Profit Rs.	Loss Rs.(lakhs)
1989-90	-	28.10
1990-91	-	21.84
1991-92	-	42.85
1992-93	-	36.98
1993-94	-	29.87

2. HG.M.L

Year	Profit Rs. in lakhs	Loss in lakhs
1989-90	384.27	-
1990-91	340.30	-
1991-92	17,52.21	-
1992-93	-	272.66
1993-94	4.55	-

3. KIMCO

1989-90	-	227.74
1990-91	-	291.76
1991-92	-	304.39
1992-93	-	286.07
1993-94	-	276.17

4. KEONICS

1989-90	-	87.39
1990-91	-	198.29
1991-92	0.74	-
1992-93	-	307.90
1993-94	57.38	-

5. KSIIDC

1989-90	93.00	-
1990-91	216.00	-
1991-92	275.00	-
1992-93	269.00	-
1993-94	183.00	-

6. MACC			
	1989-90	149.71	-
	1990-91	462.09	-
	1991-92	284.91	-
	1992-93	248.6	-
	1993-94-		122.89
7. K.T.L			
	1989-90	126.33	-
	1990-91	100.07	-
	1991-92	125.18	-
	1992-93	478.52	-
	1993-94	108.58	-
8. M.C.I			
	1989-90	-	18.17
	1990-91	-	10.32
	1991-92	-	8.77
	1992-93	-	15.65
	1993-94	-	4.80
9. MYSUGAR			
	Year	Profit (Rs. in lakhs)	loss (Rs. in lakhs)
	1989-90	213.30	-
	1990-91	161.27	-
	1991-92	-	26.18
	1992-93	-	225.42
	1993-94	222.034	-
10. NGEF			
	1989-90	119.11	-
	1990-91	249.91	-
	1991-92	-	678.91
	1992-93	-	2089.05
	1993-94	-	2549.37
11. KAVIKA			
	1989-90	59.24	-
	1990-91	84.06	-
	1991-92	159.63	-

	1992-93	30.02	-
	1993-94	277.25	-
12. M.P.V.L			
	1989-90	71.99	2.48
	1990-91	-	2.48
	1991-92	49.54	-
	1992-93	9.61	-
	1993-94	91.62	-
13. K.S.& D.L.			
	1989-90	-	1230.49
	1990-91	-	1394.34
	1991-92	-	1026.82
	1992-93	-	1145.67
	1993-94	-	562.67
14. M.E.I			
	1989-90	44.87	-
	1990-91	-	85.19
	1991-92	39.29	-
	1992-93	95.18	-
	1993-94	733.71	-
15. M.L.W			
	1989-90	59.90	-
	1990-91	272.10	-
	1991-92	246.35	-
	1992-93	113.67	-
	1993-94	-	125.11
16. MC.T.C			
	1989-90	-	78.84
	1990-91	-	57.57
	1991-92	-	58.93
	1992-93	-	64.81
	1993-94	-	73.52
17. M.S.I.L			
	Year	Profit	Loss
	1989-90	24.66	-
	1990-91	166.01	-
	1991-92	169.94	-

	1992-93	348.91	-
	1993-94	365.91	-
18. M.P.M			
	1989-90	972.00-	
	1990-91	20.47.00	-
	1991-92	1318.00	-
	1992-93	1318.00	522.00
	1993-94	-	522.00
19. M.C.A			
	1989-90	4.80	-
	1990-91	1.84	-
	1991-92	3.56	-
	1992-93	15.86	-
	1993-94	8.24	-

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಲ್ಲಿ ಎಷ್ಟು ಉದ್ಯಮಗಳು ಲಾಭದಲ್ಲಿವೆ ಎಷ್ಟು ನಷ್ಟದಲ್ಲಿವೆ ಎಂದು ಕೇಳಿದ್ದೆ. ಅದರಲ್ಲಿ 11 ಲಾಭದಲ್ಲಿವೆ 8 ನಷ್ಟದಲ್ಲಿವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇಲ್ಲಿ ನೋಡಿದರೆ ಒಟ್ಟು 19 ಕಾರ್ಖಾನೆಗಳಿವೆ. ಲುಕ್ಸಾನು ನೋಡಿದರೆ ಯಾವುದೂ ಲಾಭದಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಕೋಟಿಗಟ್ಟಲೆ ಲುಕ್ಸಾನು ಆಗಿದೆ. ಇದರ ಪುನಃ ಶ್ಚೇತನಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರೋ ಅಥವಾ ಖಾಸಗೀಯವರಿಗೆ ವಹಿಸಿಕೊಡುತ್ತೀರೋ, ಇದರ ಬಗ್ಗೆ ಸರ್ಕಾರದವರು ಏನಾದರೂ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುವವರಿದ್ದಾರೆಯೇ? ಇದರ ಬಗ್ಗೆ ನಿಶ್ಚಿತವಾದ ಉತ್ತರ ಕೊಡಿ. ಇಲ್ಲದಿದ್ದರೆ ಖಾಸಗಿಯವರಿಗಾದರೂ ವಹಿಸಿಕೊಡಿ ಏಕೆಂದರೆ ಹೊಸ ಹೊಸ ಕಾರ್ಖಾನೆಗಳು ಬಹಳ ಬರುತ್ತಿವೆ. ಇವು ಮಾತ್ರ ಏತಕ್ಕೆ ಲುಕ್ಸಾನಾಗುತ್ತಿವೆ? ಕಾರಣವೇನೆಂದು ದಯವಿಟ್ಟು ಹೇಳಿ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ನಷ್ಟವಾಗಿರುವುದನ್ನೆಲ್ಲಾ ಖಾಸಗಿಯವರಿಗೆ ಕೊಡಬೇಕು ಎಂದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಲುಕ್ಸಾನಾಗುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಖಾಸಗಿಯವರಿಗೆ ವಹಿಸುತ್ತೀರಾ ಎಂದು ಕೊಳ್ಳುತ್ತಿದ್ದೇ.

ಶ್ರೀ ಆರ್.ವಿ. ದೇಶಪಾಂಡೆ : ಗೌರವಾನ್ವಿತ ಸದಸ್ಯರ ಚಿಂತನೆ ಹಾಗೆ ಇದೆ ಆದರೆ ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಯಾವ ಕೈಗಾರಿಕೆ ಹಾನಿಯಲ್ಲಿದೆ ಎಲ್ಲಾ ಕೈಗಾರಿಕೆಗೆ ಒಂದೇ ರೀತಿಯ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕೆಲವು ಕೈಗಾರಿಕೆಗಳ ಬಗ್ಗೆ ಎಲ್ಲಿ ನಾವು ಪುನರ್‌ವಸತಿ ಮಾಡುವುದಕ್ಕೆ ಸರ್ಕಾರದಿಂದ ಸಾಧ್ಯವಿದ್ದರೆ ಅದನ್ನು ಪ್ರಾಧಾನ್ಯತೆ ಮೇಲೆ ಮಾಡಬೇಕಾಗುತ್ತದೆ. ಅದು ನಮ್ಮ ಕರ್ತವ್ಯ. ಅದನ್ನು ಕೈಬಿಡುವುದಕ್ಕಾಗುವುದಿಲ್ಲ. ಆದರೆ ಎಲ್ಲಿ ಬಹಳ ಕಷ್ಟವಿದೆ ಅಂಥ ಕೈಗಾರಿಕೆಗಳನ್ನು ನಾವು ಖಾಸಗೀಕರಣ ಮಾಡಬೇಕಾಗುತ್ತದೆ. ಅದೊಂದು ಕ್ರಮ. ಒಂದು ಕೈಗಾರಿಕೆ ರೀಹ್ಯಾಬಿಲಿಟೇಟ್ ಮಾಡಬೇಕಾದರೆ ಸರ್ಕಾರದಿಂದ ಅದಕ್ಕೆ ಬೇಕಾಗುವ ರಿಲೀಫ್ ಹಣ ಕೊಟ್ಟು ಮಾಡಬಹುದು. ಅದು ಸಾಧ್ಯ ಇಲ್ಲವಾದರೆ ನಾವು ಪ್ರೈವೇಟೈಸ್ ಮಾಡಬೇಕಾಗುತ್ತದೆ. ಕೆಲವು ಸಾರಿ ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ.

ಹಾಗಾಗಿ ನೇರವಾಗಿ ಯಾವ ಕೈಗಾರಿಕೆ ಬಗ್ಗೆ ಅವರು ಕೇಳುತ್ತಿದ್ದಾರೆ ಎಂಬುದು ಗೊತ್ತದರೆ ನೇರವಾಗಿ ಉತ್ತರ ಹೇಳಬಹುದು.

ತಾವು ಜನರಲ್ಲಾಗಿ ಕೇಳಿದ್ದೀರಿ. ನಾವೂ ಸಹ ಜನರಲ್ ಪ್ರಿನ್ಸಿಪಲ್ ಮೇಲೆ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತಿದೆ. ಮತ್ತು ಏನು ಹಾನಿಯಾಗುತ್ತಿದೆ ಅದರ ಬಗ್ಗೆ ಸಾಕಷ್ಟು ತಿಳುವಳಿಕೆ ಆಗಿದೆ. ಹಾಗೂ ಇನ್ನು ಮುಂದೆ ಎಲ್ಲೆಲ್ಲಿ ಹಾನಿಯಾಗುತ್ತಿದೆ, ಆ ಕೈಗಾರಿಕೆಯ ಬಗ್ಗೆ ಸರ್ಕಾರ ಪ್ರಾಧಾನ್ಯತೆ ಮೇಲೆ ಕ್ರಮ ತೆಗೆದುಕೊಳ್ಳುತ್ತದೆಂದು ನಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕಿಮ್ಕೊ 1649.50 ಲಕ್ಷ ರೂ.ಗಳಷ್ಟು ಲುಕ್ಸಾನು ಆಗಿದೆ. ವಿಶೇಷವಾಗಿ ಲುಕ್ಸಾನು ಆಗಿದೆ. ಇದನ್ನು ನೋಡಿದರೆ ಒಂದಕ್ಕಿಂತ ಒಂದು ಹೆಚ್ಚಿದೆಯೇ ಹೊರತು ಕಡಿಮೆ ಯಾವುದೂ ಕಾಣಿಸುವುದಿಲ್ಲ. ಆ ಕಾರಣದಿಂದ ಈ ಒಂದರ ಬಗ್ಗೆಯಾದರೂ ಏನು ಮಾಡುತ್ತೀರಿ? ನಿರ್ದಿಷ್ಟವಾಗಿ ಕೇಳಿದರೆ ಹೇಳುತ್ತೇನೆಂದು ಹೇಳಿದ್ದರ ಮೇರೆಗೆ ಇದನ್ನು ಕೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ಆ ಕಿಮ್ಕೋ ಕಾರ್ಖಾನೆಯನ್ನು ಕೆ.ಎಸ್.ಆರ್.ಟಿ.ಸಿ.ಗೆ ಮರ್ಜ್ ಮಾಡಬೇಕೆಂದಗು ತೀರ್ಮಾನವಾಗಿದೆ. ಏಕೆಂದರೆ ಕೆ.ಎಸ್.ಆರ್.ಟಿ.ಸಿ. ಅಲ್ಲಿ ಬಾಡಿ ಬಿಲ್ಡಿಂಗ್ ಮಾಡುತ್ತಿದೆ. ಪ್ರಶ್ನೆ ಏನು ಇದೆ ಅಂದರೆ ಕೆಲವು ಫೈನಾನ್ಸಿಂಗ್ ಇನ್ಸಿಟಿಟ್ಯೂಷನ್‌ಗೆ ಪೇಮೆಂಟ್ ಮಾಡುವ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. It will be merged with the KSRTC.

ಶ್ರೀ ಕೆ.ಎನ್. ನಾಗೇಗೌಡ : ಈಗಾಗಲೇ ಸಚಿವರು ಹೇಳಿದ ರೀತಿಯಲ್ಲಿ ಒಂದೊಂದು ಕೈಗಾರಿಕೆಗೆ ಒಂದೊಂದು ರೀತಿಯ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಕರ್ನಾಟಕದಲ್ಲಿ ಕೆಲವು ಇಂಡಸ್ಟ್ರೀಸ್‌ಗಳು 'ಸಿಕ್ಕ್'ಗಿ ಈ ರೀತಿಯಾಗುತ್ತಿರುವುದನ್ನು ಬಹಳ ವರ್ಷಗಳಿಂದಲೂ ಕೇಳುತ್ತಿದ್ದೇವೆ. ತಾವು ಹೇಳಿದ ಹಾಗೆ ಒಂದೊಂದು ಕೈಗಾರಿಕೆಗೆ ಒಂದೊಂದು ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕಾದರೆ ಟೈಮ್ ಬೌಂಡ್ ಪ್ರೋಗ್ರಾಂ ಮಾಡಿ 3 ತಿಂಗಳೊಳಗೆ ಟೆಕ್ನಿಕಲ್, ಫೈನಾನ್ಸಿಯಲ್ ಹಾಗೂ ಮಾರ್ಕೆಟಿಂಗ್ ಈ 3 ಜನ ಕನ್ಸಲ್ಟೆಂಟ್ಸ್ ಇರತಕ್ಕಂತಹ ಎಕ್ಸ್‌ಪರ್ಟ್ ಕಮಿಟಿ ಮಾಡಿ, 3 ತಿಂಗಳೊಳಗೆ ಯಾವುದನ್ನು ಪ್ರೈವೇಟೈಜೇಷನ್ ಮಾಡಬಹುದು? ಯಾವುದಕ್ಕೆ ಡಿಸ್ ಇನ್ವೆಸ್ಟ್‌ಮೆಂಟ್ ಮಾಡಬಹುದು. ಯಾವುದಕ್ಕೆ ಮಾರ್ಕೆಟಿಂಗ್ ಮಾಡಬಹುದು, ಯಾವುದಕ್ಕೆ ಗೌರ್ನಮೆಂಟ್ ಫೈನಾನ್ಸ್ ಮಾಡಬಹುದು, ಯಾವುದಕ್ಕೆ ಬ್ಯಾಂಕ್ ಗ್ಯಾರಂಟಿ ಕೇಳಬಹುದು, ಇದನ್ನು ಮಾಡುವುದಕ್ಕೆ 3 ತಿಂಗಳೊಳಗೆ ಒಂದು ಕ್ಲಿಯರ್‌ಕಟ್ ಪಾಲಿಸಿಯನ್ನು ಮಾಡುತ್ತೀರಾ? ಇದರ ಬಗ್ಗೆ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶವನ್ನು ಕೊಟ್ಟಿದ್ದಾರೆ. ಒಂದು ತಿಂಗಳೊಳಗೆ ನಮ್ಮ ಹಣಕಾಸಿನ ಕಾರ್ಯದರ್ಶಿಗಳು, ನಮ್ಮ ಇಲಾಖೆಯ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿ ಯಾವ ತರಹದ ಕ್ರಮವನ್ನು ನಾವು ಯಾವ ಕೈಗಾರಿಕೆಗಳ ಬಗ್ಗೆ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಮಗೆ ರಿಪೋರ್ಟ್ ಕೊಡಬೇಕೆಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟಿದ್ದಾರೆ. ಎಕ್ಸ್‌ಪರ್ಟ್ ಕಮಿಟಿ ಎಂದು ಹೇಳಿದಾಗ ಹ ವಾರು ಕಮಿಟಿ ರಿಪೋರ್ಟ್‌ಗಳು ಇವೆ. ದಾತರ್ ಕಮಿಟಿ ರಿಪೋರ್ಟ್ ಎಂದು ಇದೆ. ಸತ್ಯಜೀತ್ ಕಮಿಟಿ ರಿರ್ಪೋಟ್ ಎಂದು ಇದೆ. ಎಕ್ಸ್‌ಪರ್ಟ್ ಅಂದರೆ ಬ್ಯಾಲೆನ್ಸ್‌ಷೀಟ್ ಮೇಲೆ ಲೆಕ್ಕವನ್ನು ನೋಡಿ ಹೇಳಬೇಕಾಗುತ್ತದೆ. ಅದನ್ನು ನಾವೇ ಮಾಡಬಹುದು. ಉದಾಹರಣೆಗೆ ಹೇಳುವುದಾದರೆ ಎನ್.ಜಿ.ಇ.ಎಫ್. ಈ ವರ್ಷ 25 ಕೋಟಿ ರೂಪಾಯಿಗಳು ಹಾನಿಯನ್ನು ಮಾಡುತ್ತಿದೆ. ಹಾಗಾಗಿ ಅವಶ್ಯಕತೆ

ಬಿದ್ದರೆ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡೋಣ. ಈಗಾಗಲೇ ಆ ಕೈಗಾರಿಕೆ ಯಾವ ಪ್ರಕಾರವಾಗಿ ನಡೆಯುತ್ತದೆ ಅದರ ಬಗ್ಗೆ ಕಷ್ಟಸುಖ ಏನು ಎಂಬುದು ಗೊತ್ತಿರುವಾಗ ಅದರ ಅವಶ್ಯಕತೆ ಇರುವುದಿಲ್ಲ. ಆದರೆ ಅವಶ್ಯಕತೆ ಇದ್ದರೆ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡುತ್ತೇವೆ. ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನಷ್ಟವನ್ನು ಅನುಭವಿಸುತ್ತಿರತಕ್ಕಂತಹ ಕಂಪನಿಗಳ ಲಿಸ್ಟ್‌ನ್ನು ಕೊಟ್ಟಿದ್ದಾರೆ ಮತ್ತು ಲಾಭ ಪಡೆಯುತ್ತಿರುವಂತಹ ಕಂಪನಿಗಳ ಪಟ್ಟಿಯನ್ನೂ ಕೊಟ್ಟಿದ್ದಾರೆ. ಮುಖ್ಯವಾಗಿ ಒಂದು ಪ್ರಶ್ನೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಕಾರ್ಖಾನೆ 2 ವರ್ಷಗಳ ಹಿಂದಿನವರೆಗೂ ಕೂಡ ಬಹಳ ಲಾಭದಾಯಕವಾಗಿ ನಡೆಯುತ್ತಿದ್ದಂತಹ ಒಂದು ಕಾರ್ಖಾನೆ. ಆದರೆ ಈಗ 2 ವರ್ಷಗಳಿಂದ ನಷ್ಟ ಅನುಭವಿಸುತ್ತಿದೆ. ಇದಕ್ಕೆ ಮುಖ್ಯವಾದ ಕಾರಣ ನನಗೆ ಗೊತ್ತಿದ್ದ ಮಾಹಿತಿ ಪ್ರಕಾರ ಅಲ್ಲಿದ್ದಂತಹ ಪ್ರಾಮಾಣಿಕ ಅಧಿಕಾರಗಳನ್ನು ಬದಲಾವಣೆ ಮಾಡಿ ಈಗ ಬೇರೆ ಅಧಿಕಾರಿಗಳು ಬಂದ ಮೇಲೆ ನಷ್ಟವನ್ನು ಅನುಭವಿಸುತ್ತಿದೆ ಎನ್ನತಕ್ಕಂತಹದ್ದು ಅದೇ ರೀತಿ ಎನ್.ಜಿ.ಇ.ಎಫ್., ಕಿವ್ಮೋ, ಕವಿಕ ಲಾಭದಿಂದ ನಡೆಯುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಅಲ್ಲಿರತಕ್ಕ ಮ್ಯಾನೇಜ್‌ಮೆಂಟ್‌ನ ಲೋಪದೋಷದಿಂದ ಹೆಚ್ಚಿನ ಕೈಗಾರಿಕೆಗಳು ನಷ್ಟವನ್ನು ಅನುಭವಿಸುತ್ತಿವೆ. ಅದರ ಅಧಿಕಾರಿಗಳ ಬೇ-ಜವಾಬ್ದಾರಿಯಿಂದ ನಷ್ಟ ಅನುಭವಿಸುತ್ತಿವೆ ಎಂದು ಸಾಮಾನ್ಯವಾಗಿ ಹೇಳತಕ್ಕಂಥ ಅಂಶ. ಈ ಅಂಶವನ್ನು ಸರ್ಕಾರ ಪರಿಗಣಿಸಬೇಕಾಗಿದೆ. ಈಗ ನಷ್ಟವನ್ನು ಅನುಭವಿಸುತ್ತಿದೆ ಎನ್ನುವ ಕಾರಣವನ್ನು ಮುಂದಿಟ್ಟು ಅದನ್ನು ಖಾಸಗೀಯವರಿಗೆ ಕೊಡುವಂತಹ ಕೆಲಸವಾಗಬಾರದು ನಿಜವಾಗಿಯೂ ನಷ್ಟವನ್ನು ಅನುಭವಿಸುತ್ತಿದ್ದರೆ ಅಲ್ಲಿರತಕ್ಕ ಮ್ಯಾನೇಜ್‌ಮೆಂಟ್ ಕಾರಣವೇ ಹೊರತು ಬೇರೆ ಯಾವುದೇ ಕಾರಣ ಇರಲಿಕ್ಕೆ ಸಾಧ್ಯವಿಲ್ಲ. ಮಾರ್ಕೆಟಿಂಗ್ ಇರುವುದಕ್ಕೆ ಸಾಧ್ಯ ಇಲ್ಲ, ಉತ್ಪಾದನೆಯ ಗುಣಮಟ್ಟದಲ್ಲಿ ಇರುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ನಾನು ಮೊದಲು ಹೇಳಿದ್ದನ್ನು ತಾವು ಪರಿಗಣಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ವಿಕ್ರಾಂತ್ ಟೈರ್ ಸ್ಟೇಟ್ ಕಂಪನಿಯಲ್ಲ, ನಮ್ಮ ಕೆ.ಎಸ್.ಐ.ಡಿ.ಡಿ.ಸಿ. ಮತ್ತು ಎಂ.ಎಸ್.ಐ.ಎಲ್.ನವರು ಷೇರು ಹೋಲ್ಡರ್ಸ್ ಇದ್ದಾರೆ ಅವರದ್ದು 49 ಪರ್ಸೆಂಟ್ ಇದೆ. ಆದರೂ ಅವರು ಪ್ರಶ್ನೆ ಕೇಳಿದಾಗ ಉತ್ತರವನ್ನು ಸರ್ಕಾರದ ವತಿಯಿಂದ ಕೊಡಬೇಕಾಗುತ್ತದೆ. ಅಧಿಕಾರಿಗಳಿಂದ ಹಾನಿಯಾಗುತ್ತದೆಂಬುದನ್ನು ನೀವು ನನಗೆ ಕನ್ವಿನ್ಸ್ ಮಾಡಿದರೆ ಆ ಅಧಿಕಾರಿಯನ್ನು ತಕ್ಷಣ ಟ್ರಾನ್ಸ್‌ಫರ್ ಮಾಡುತ್ತೇನೆ. ಆದರೆ ಆ ರೀತಿ ಇಲ್ಲ, ಅದೂ ಒಂದು ಕಾರಣ ಇರಬಹುದು, ಒಪ್ಪಿಕೊಳ್ಳುತ್ತೇನೆ. ಅದನ್ನು ಪರಿಗಣನೆ ಮಾಡುತ್ತಿದ್ದೇನೆ. ಆದರೆ ಇದಕ್ಕೆ ಹಲವಾರು ಕಾರಣಗಳು ಇವೆ. ಒರಿಜಿನಲ್ ಆಗಿ ವಿಕ್ರಾಂತ್ ಟೈರ್ ಕಂಪನಿ ಬಹಳ ಚೆನ್ನಾಗಿ ನಡೆಯುತ್ತಿತ್ತು. ರೇಡಿಯೆಲ್ ಟೈರನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡಿದಾಗಿನಿಂದ ಕಳೆದ 5 ವರ್ಷಗಳಿಂದ ಅದು ಹಾನಿಯಲ್ಲಿ ನಡೆಯುತ್ತಿದೆ. ಈ ವರ್ಷ even now it has gone into loss.

ನಿನ್ನೆ ಇದರ ಬಗ್ಗೆ ಡಿಸ್‌ಕಸ್ ಮಾಡಿದ್ದೇನೆ. ಟರ್ನ್ ಓವರ್ ಹೆಚ್ಚಾಗಿದೆ. ಸೇಲ್ಸ್ ಹೆಚ್ಚಾಗಿದೆ. ಆದರೆ ಫ್ರಾಫಿಟ್ ಮಾರ್ಜಿನ್ ಕಡಿಮೆಯಾಗುತ್ತಿದೆ. ಬಹಳಷ್ಟು ಕಾಂಪಿಟೇಷನ್ ಮಾಡುವುದಕ್ಕೆ ನಮ್ಮದು ಪ್ರಯಾರಿಟಿ ಇಲ್ಲ, ಆದ್ದರಿಂದ ಆ ಕೈಗಾರಿಕೆಯನ್ನು ರೀ-ಹ್ಯಾಬಿಲೇಟ್ ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಮಾಡುವುದಕ್ಕೆ ಆಗುವುದೇ ಇಲ್ಲ ಎನ್ನುವಾಗ privatisation is one of the answers.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕಿಮ್ಕೋವನ್ನು ಕೆ.ಎಸ್.ಆರ್.ಟಿ.ಸಿ.ಗೆ ಮರ್ಜ್ ಮಾಡುತ್ತೇವೆಂದು ಹೇಳಿದ್ದಾರೆ. ಅದರದ್ದು 1600 ಕೋಟಿ ರೂ. ಲುಕ್ಸಾನು. ಅದೇ

ರೀತಿ ಕೆ.ಎಸ್.ಅಂಡ್.ಡಿ.ಎಲ್. ನಲ್ಲಿ 7363.99 ಲಕ್ಷ ರೂಪಾಯಿಗಳ ಲುಕ್ಸಾನಾಗಿದೆ. ಇದನ್ನು ಯಾವುದರ ಜೊತೆಗಾದರೂ ಮರ್ಜ್ ಮಾಡಿ ಬಿಡುತ್ತೀರಾ? ಇದರ ಬಗ್ಗೆ ಏನು ಮಾಡುತ್ತೀರಿ.

ಶ್ರೀ ಆರ್.ವಿ. ದೇಶಪಾಂಡೆ : ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಕೇಳುತ್ತಿದ್ದಾರೆ. ಅದೂ ಹಾನಿ ಮಾಡುತ್ತಿದೆ. ಕಳೆದ ಒಂದು ವರ್ಷದಿಂದ it is showing the sigh of improvement. ಈ ವರ್ಷ ಅಲ್ಲಿ ಕಡಿಮೆ ಹಾನಿಯಾಗಬಹುದು. There is lot of improvement in that organisation. ಹಾಗೆ ಇದರ ಬಗ್ಗೆಯೂ ಯಾವ ಪ್ರಕಾರ ಸರ್ಕಾರ ಸಹಾಯ ಮಾಡಿ ರೀ-ಹ್ಯಾಬಿಲಿಟೇಟ್ ಮಾಡಬಹುದು ಎನ್ನುವುದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಹೆಚ್. ಶಿವಪ್ಪ : ಕೆಲವು ಕಂಪನಿಗಳು ಸತತವಾಗಿ ಲುಕ್ಸಾನನ್ನು ಅನುಭವಿಸುತ್ತಾ ಬಂದಿವೆ. ಈ ರೀತಿಯ ಲುಕ್ಸಾನು ಆಗಬೇಕಾದರೆ ತಾಂತ್ರಿಕವಾದ ಕಾರಣವೋ? ಅಥವಾ ಆಡಳಿತಾತ್ಮಕವಾದ ಕಾರಣವೋ? ಮಾರ್ಕೆಟಿಂಗ್ ಇಲ್ಲದಿದ್ದರೆ ಅದು ಎಷ್ಟರ ಮಟ್ಟಿಗೆ* ಕಾರಣ? ಯಾವುದು ಎಂಬುದನ್ನು ಇದರ ಬಗ್ಗೆ ತಪಾಸಣೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಏಕೆಂದರೆ ಕೆಲವು ಕಂಪನಿಗಳು ಸತತವಾಗಿ ಲುಕ್ಸಾನನ್ನು ಅನುಭವಿಸುತ್ತಾ ಬಂದಿವೆ. What are the steps taken by the Government to rehabilitate or improve the present condition and has it come to the notice of the Government.

ಶ್ರೀ ಆರ್.ವಿ. ದೇಶಪಾಂಡೆ : ಇದು ಸರ್ಕಾರದ ಗಮನಕ್ಕೆ ಬರುತ್ತಿರುವುದರಿಂದಲೇ ನಾನು ನಿಮಗೆ ಉತ್ತರ ಕೊಡುತ್ತಿದ್ದೇನೆ. ನೇರವಾಗಿ ಯಾವ ಕೈಗಾರಿಕೆಗೆ ಯಾವ ಔಷಧಿ ಕೊಡಬೇಕು? ಯಾವ ಕಾರಣದಿಂದ ನಷ್ಟವಾಗುತ್ತಿದೆ ಎಂಬುದನ್ನು ಅಯಾ ಇಂಡಸ್ಟ್ರೀಸ್‌ಗಳನ್ನು ನೋಡಿ ಹೇಳಬಹುದು. Technicaal know-how ಏನು ಇದೆ ಅದು ಬಹಳ ಹಳೆಯದು ಇದೆ. ಇಂಟ್ರಿಸ್ಟ್ ಬರ್ಡನ್ ಬಹಳ ಬರುತ್ತಿದೆ. ಇನ್ನೂ ಕೆಲವು ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚು ಇದೆ. ಹೀಗಾಗಿ ಹಲವಾರು ಬೇರೆ ಬೇರೆ ಕಾರಣಗಳು ಇವೆ. ಆದಷ್ಟು ಬೇಗ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಸಮಾಧಾನವಾಗುವ ಹಾಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಕರ್ನಾಟಕ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿದ ವಿದೇಶಿ ಬಂಡವಾಳದಾರರು

432 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ಸರ್ಕಾರದ ಕೈಗಾರಿಕಾ ಉದಾರೀಕರಣ ನೀತಿಯನ್ನು ಅನುಸರಿಸಿ ಕಳೆದ ಮೂರು ತಿಂಗಳುಗಳಿಂದ ಸರ್ಕಾರದವರು ಎಷ್ಟು ಹೊರ ದೇಶಗಳ ಬಂಡವಾಳಗಾರರನ್ನು ಆಹ್ವಾನಿಸಿದ್ದಾರೆ?

ಆ) ಈ ಪೈಕಿ ಯಾವ ಯಾವ ರಾಷ್ಟ್ರಗಳಿಂದ ಯಾವ ಯಾವ ಕಂಪನಿಯವರು ಅಥವಾ ಖಾಸಗಿ ಉದ್ಯಮಿಗಳು ಈ ರಾಜ್ಯಕ್ಕೆ ಬರಲು ಒಪ್ಪಿದ್ದಾರೆ; ಮತ್ತು ಯಾವ ಷರತ್ತುಗಳ ಮೇಲೆ ಅವರು ಬರುವವರಿದ್ದಾರೆ?

ಇ) ವಿದೇಶಿ ಬಂಡವಾಳಗಾರರು ಎಷ್ಟೆಷ್ಟು ಬಂಡವಾಳಗಳನ್ನು ಯಾವ ಯಾವ ಕೈಗಾರಿಕೆಗಳ ಸ್ಥಾಪನೆಗೆ ಹೂಡಲು ಮುಂದೆ ಬಂದಿದ್ದಾರೆ.

ಈ) ರಾಜ್ಯ ಸರ್ಕಾರದವರು ಅವರುಗಳಿಗೆ ಕೊಡಲು ಒಪ್ಪಿರುವ ಅನುಕೂಲಗಳೇನು?

ಉ) ರಾಜ್ಯ ಸರ್ಕಾರಕ್ಕೂ ವಿದೇಶಿ ಬಂಡವಾಳಗಾರರಿಗೂ ಆಗಿರುವ ಒಪ್ಪಂದಗಳೇನು?